ಕರ್ನಾಟಕ ವಿಧಾನಸಭೆ

ಶುಕ್ರವಾರ 14ನೇ ಜುಲೈ 2006ರಂದು ಸದನವು

ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಗ್ಗೆ 10 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು)

ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ:

(ಅ) ವಿಷಯ: **ಮಾನ್ಯ ಮುಖ್ಯಮಂತ್ರಿಗಳ ಉತ್ತರವನ್ನು ಲೈವ್ ಕವರೇಜ್ ಮಾಡುವ ಬಗ್ಗೆ.**

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ಈ ಶಾಸನ ಸಭೆಗೆ ಒಂದು ಘನತೆ ಗೌರತ ಬೇಡವೆ? ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವಾಗ ಲೈವ್ ಕವರೇಜ್ ಕೊಡುವುದು. ಇನ್ಯಾವುದೋ ವಿಷಯದ ಮೇಲೆ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಲೈವ್ ಕವರೇಜ್ ಕೊಡುವುದು. ಈ ಶಾಸನ ಸಭೆಯನ್ನು ಯಾವುದೋ ಒಂದು ರಾಜಕೀಯ ಪಕ್ಷದ ಪ್ರಚಾರಕ್ಕೋಸ್ಕರ ಇಟ್ಟುಕೊಂಡಿದ್ದೀರಾ ಮಾನ್ಯ ಅಧ್ಯಕ್ಷರೆ?

ಅಧ್ಯಕ್ಷರು : ಈ ಶಾಸನ ಸಭೆ ಪ್ರಚಾರಕ್ಕೆ ಇಲ್ಲ.

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) : ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವಾಗ ಲೈವ್ ಇದೆ.

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ : ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಲೈವ್ ಇದ್ದರೆ ಏನೂ ತಪ್ಪಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಈ ಬಜೆಟ್ ಓದುವಾಗ ಲೈವ್ ಇತ್ತು. ಅದರ ಬಗ್ಗೆ ನಾವು ಕೇಳಿದೆವಾ? ರಾಜ್ಯಪಾಲರು ಭಾಷಣ ಮಾಡುವಾಗ ನಾವು ಕೇಳಿದೆವಾ? ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವಾಗ ಮಾತ್ರ ಪ್ರಚಾರ ಕೊಡಬೇಕಾ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಿರುವುದರಿಂದ ಅದರ ಬಗ್ಗೆ ತಪ್ಪೇನೂ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಈ ತರಹ ಯಾವತ್ತು ಈ ರಾಜ್ಯದಲ್ಲಿ ಆಗಿದೆ?

ಶ್ರೀ ವಾಟಾಳ್ ನಾಗರಾಜ್ : ಯಾವತ್ತು ಆಗಿದೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ಲೈವ್ ಪ್ರೋಗ್ರಾಮ್‌ಗೆ 15 ಲಕ್ಷ ರೂಪಾಯಿಗಳು ಖರ್ಚಾಗುತ್ತದೆ.

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್ : ಇದರ ಉದ್ದೇಶವೇನು ಹೇಳಿ? ಇದರ ಬಗ್ಗೆ ನೀವು ಸತ್ಯವನ್ನು ಹೇಳಬೇಕು.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಈಗ ಕೇಳಿ, ಸರ್ಕಾರದಿಂದ 3 ದಿನಗಳ ಹಿಂದೆಯೇ ಒಂದು ಪತ್ರ ಬಂದಿತ್ತು. ಅದಕ್ಕೆ ನಾನು ಅನುಮತಿ ಕೊಟ್ಟು ಪ್ರಾರಂಭ ಮಾಡಿದ್ದೇನೆ.

(ಈ ಹಂತದಲ್ಲಿ ಜೆಡಿ(ಯು) ಹಾಗೂ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದರು)

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್ : ಲೈವ್ ಮಾಡುವುದಕ್ಕೆ ನಾವು ಬಿಡುವುದಕ್ಕಾಗುವುದಿಲ್ಲ. ಇದನ್ನು ಯಾವಾಗಿನಿಂದ ಕೊಡುತ್ತಿದ್ದೀರಿ ನೀವು? ಏತಕ್ಕೆ ಕೊಡುತ್ತಿದ್ದೀರಿ ನೀವು?

(ಅಡಚಣೆ)

ಶ್ರೀ ಜೆ.ಸಿ. ಮಾಧುಸ್ವಾಮಿ : ಜಾಕ್‌ಪಾಟ್ ಇಲ್ಲದೆ 150 ಕೋಟಿ ರೂಪಾಯಿಗಳನ್ನು ಹೊಡೆದಿದ್ದಾರೆ. ಇದರ ಬಗ್ಗೆ ರಾಜ್ಯದ ಜನರಿಗೆ ಗೊತ್ತಾಗುತ್ತದೆ.

ಅಧ್ಯಕ್ಷರು : ನೋ, ನೋ.

ಒಬ್ಬ ಮಾನ್ಯ ಸದಸ್ಯರು : ಇದಕ್ಕೆ ನೀವು ಹೇಗೆ ಕೊಟ್ಟಿದ್ದೀರಿ?

ಅಧ್ಯಕ್ಷರು : 3 ದಿವಸಗಳ ಹಿಂದೆಯೇ ಅವರು ಕೇಳಿದ್ದಕ್ಕೆ ನಾನು ಪರ್ಮಿಷನ್‌ನ್ನು ಕೊಟ್ಟಿದ್ದೇನೆ. ಅವರು ಯಾವಾಗ ಮಾಡುತ್ತಾರೆಂಬುದು ನನಗೆ ಗೊತ್ತಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾವು ಬಹಳ ಗೌರವವನ್ನು ಸದನಕ್ಕೆ ಕೊಡುತ್ತೇವೆ.

(ಅಡಚಣೆ)

ಅಧ್ಯಕ್ಷರು : ಆಯಿತು, ಆಯಿತು.

ಶ್ರೀ ಜೆ.ಸಿ. ಮಾಧುಸ್ವಾಮಿ ; ಈ ಸದನಕ್ಕೆ ಇದು ಒಳ್ಳೆಯದಲ್ಲ.

ಅಧ್ಯಕ್ಷರು : ಆಯಿತು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಇದು ಸದನಕ್ಕೆ ಒಳ್ಳೆಯದಲ್ಲ.

ಶ್ರೀ ಕೆ. ಶ್ರೀನಿವಾಸಗೌಡ : ಹೇಗೆ ಕೊಟ್ಟಿದ್ದೀರಿ ಎಂದು ಕೇಳುವುದಿಲ್ಲ. ಇಲ್ಲಿ ಯಾರಿಗೂ ಚಾಗವಿಲ್ಲ.

ಅಧ್ಯಕ್ಷರು : ಇರಲಿ, ಇರಲಿ. ಅವರು ಕೇಳುತ್ತಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇದು ಒಳ್ಳೆಯದಲ್ಲ. ಅದಕ್ಕೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ತಾವುಗಳು ಕುಳಿತುಕೊಳ್ಳಿ. ನಾನು ಹೇಳಿದೆನಲ್ಲಾ. 3 ದಿವಸದ ಹಿಂದೆಯೇ ಸರ್ಕಾರದಿಂದ ಒಂದು ಪತ್ರ ಬಂದಿತ್ತು. ಅದಕ್ಕೆ ಅವಕಾಶ ಕೊಟ್ಟಿದ್ದೇನೆ. ಅವರು ನಿನ್ನೆ ದಿವಸ ಕವರ್ ಮಾಡಿಲ್ಲವೆಂಬುದು ಗೊತ್ತಿಲ್ಲ. ಆ ಕಾರಣದಿಂದ ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಇದರ ಉದ್ದೇಶವೇನು? ಇದು ಮಾನ್ಯ ಮುಖ್ಯಮಂತ್ರಿಗಳಿಗೆ ಮಾತ್ರ ಉಂಟು. ನಮಗೆ ಇಲ್ಲವೋ? ಏತಕ್ಕಾಗಿ ನಮಗಿಲ್ಲ? ನಿಮ್ಮದು ಏನು ಕಾರಣ? ಈ ವ್ಯವಸ್ಥೆಯನ್ನು ನಾವು ನೋಡುತ್ತಿದ್ದೇವೆ. ಯಾವ ಉದ್ದೇಶಕ್ಕಾಗಿ ಇದನ್ನು ಮಾಡುತ್ತಿದ್ದೀರಿ?

(ಅಡಚಣೆ)

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೇ, ನಾನು ಇಷ್ಟ ಬಂದ ಹಾಗೆ ಸಭೆ ನಡೆಸುತ್ತಿಲ್ಲ. ಸರ್ಕಾರದಿಂದ ಇಂತಹ ಅನೇಕ ಮನವಿಗಳು ಬಂತು. ಅದು ಹಿಂದೆಯೂ ಬಂದಿತ್ತು. ಈಗಲೂ ಸಹ ಬಂದಿದೆ. ನಾನು ಕಳುಹಿಸಿದ್ದೇನೆ. ಆಗಲೂ ಅಷ್ಟೇ ಈಗಲೂ ಅಷ್ಟೇ. 3 ದಿವಸದ ಹಿಂದೆ ಬಂದಿತ್ತು. ನಾನು ಕರೆಸಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನೇರ ಪ್ರಸಾರವನ್ನು ಕೊಡುವುದರಿಂದ ಈ ಸದನವನ್ನು ದುರುಪಯೋಗ ಪಡಿಸಿಕೊಂಡಿದ್ದೀರಿ? xx ಇಟ್ಟುಕೊಂಡಿದ್ದೇವೆ. xx ಈಗ ಸಮಗ್ರವಾದ ಚರ್ಚೆಯ ಬಗ್ಗೆ ನೀವು ನೇರವಾದ ಪ್ರಸಾರವನ್ನು ಕೊಡಲಿಲ್ಲ. ಮಾನ್ಯ ಮುಖ್ಯಮಂತ್ರಿಯವರ ಉತ್ತರಕ್ಕೆ.....

(ಅಡಚಣೆ)

ಅಧ್ಯಕ್ಷರು : ಎಲ್ಲರೂ ಮತದಾರರಿದ್ದಾರೆ. ಯಾರೂ ಮತದಾರರಿಲ್ಲದೇ ಇಲ್ಲ.

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಇಡೀ ಕರ್ನಾಟಕ ರಾಜ್ಯ ನೋಡುತ್ತಿರುವಂತಹ ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೊಡುವಂತಹ ಉತ್ತರವನ್ನು ಅಪೇಕ್ಷೆಪಟ್ಟಂತಹ ಸಂದರ್ಭದಲ್ಲಿ ನೀವು ಮಾಡಿರುವಂತಹ ಅಧಿಕಾರವನ್ನು, ನೀವು ಮಾಡಿರುವಂಥ ಆರ್ಡರ್ ಅನ್ನು ಪ್ರಶ್ನೆ ಮಾಡುವಂತಹ ಅಧಿಕಾರ ಯಾರಿಗೂ ಇಲ್ಲ.

(ಅಡಚಣೆ)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಇದು ತಪ್ಪಾಗುತ್ತದೆ.

(ಅಡಚಣೆ)

---

x ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : xx

ಶ್ರೀ ಕೆ.ಎಸ್. ಈಶ್ವರಪ್ಪ : ತಾವು ತೆಗೆದುಕೊಂಡಿರುವ ತೀರ್ಮಾನದ ಬಗ್ಗೆ.....

ಶ್ರೀ ವಾಟಾಳ್ ನಾಗರಾಜ್ : ಇದು ನೇರ ಪ್ರಸಾರ.....

ಶ್ರೀ ಕೆ. ಈಶ್ವರಪ್ಪ : ತಮ್ಮ ಅಧಿಕಾರವನ್ನು ಪ್ರಶ್ನೆ ಮಾಡುವಂತಹ ಅಧಿಕಾರ ಯಾರಿಗೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಚರ್ಚೆ ಮಾಡುವುದಕ್ಕೆ ಇಲ್ಲ.

(ಅಡಚಣೆ)

ಅಧ್ಯಕ್ಷರು : ಕೇಳಿ. 3 ದಿನದ ಹಿಂದೆಯೇ ಒಂದು ಪತ್ರ ಮುಖ್ಯಮಂತ್ರಿಗಳ ಕಾರ್ಯಾಲಯದಿಂದ ಪತ್ರ ಬಂದಿತ್ತು. ಅದಕ್ಕೆ ನಾನು ಕೊಟ್ಟಿದ್ದೇನೆ. ಇವತ್ತಿಗೆ ಎಂದು ನಾನು ಕೊಟ್ಟಿಲ್ಲ. 3 ದಿವಸದ ಹಿಂದೆಯೇ ಕೊಟ್ಟಿದ್ದೇನೆ. ಇದು ಬಹಳ ಮುಖ್ಯವಾದುದು ಅದನ್ನು Live ಕವರ್ ಮಾಡುವುದಕ್ಕೆ ನೀವು ಪರ್ಮಿಷನ್ ಕೊಡಬೇಕೆಂದು ಒಂದು ಪತ್ರ ಬಂದಿತ್ತು. ಅವರು ಪರ್ಮಿಷನ್ ಕೇಳಿದ್ದರು. ಅದನ್ನು ಕೊಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಎಲ್ಲದಕ್ಕೂ ಕೊಡಬೇಕಾಗಿತ್ತು.

ಅಧ್ಯಕ್ಷರು : ಇವತ್ತು ಎಂದು ನಾನು ಕೊಟ್ಟಿಲ್ಲ. ನಾನು 3 ದಿವಸದ ಹಿಂದೆಯೇ ಕೊಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಎರಡು ದಿವಸದ ಹಿಂದೆ ಏಕೆ ಕೊಟ್ಟಿಲ್ಲ? ಎನ್‌ಡಿಟಿವಿಗೆ ಏಕೆ ಕೊಟ್ಟಿಲ್ಲ? ಈ ಟಿವಿಗೆ ಏತಕ್ಕೆ ಕೊಟ್ಟಿಲ್ಲ? ಈ ಮಾಧ್ಯಮಗಳಿಗೆ ಏಕೆ ಕೊಟ್ಟಿಲ್ಲ? ನೀವು ಸಂಪೂರ್ಣ ಮಾಡಬೇಕಾಗಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ರೀತಿಯಾಗಿ ಪಬ್ಲಿಸಿಟಿ ತೆಗೆದುಕೊಳ್ಳುವುದಕ್ಕೆ ಮಾಡಬೇಕೆಂದರೆ, ತಾವು ಎಲ್ಲರಿಗೂ ಅವಕಾಶವನ್ನು ಕೊಡಬೇಕಾಗಿತ್ತು. ಅದನ್ನು ಬಿಟ್ಟು.....

ಅಧ್ಯಕ್ಷರು : ಮಾನ್ಯ ಖರ್ಗೆಯವರೆ, ನಾನು 3 ದಿವಸದ ಹಿಂದೆಯೇ ಪರ್ಮಿಷನ್ ಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೋ, ನೋ.

ಅಧ್ಯಕ್ಷರು : ಅದನ್ನು ನಾನು ಸ್ಪಷ್ಟ ಮಾಡುತ್ತಿದ್ದೇನೆ. 3 ದಿವಸಗಳ ಹಿಂದೆಯೇ ಪತ್ರ ಬಂದಿತ್ತು. ಕೊಟ್ಟಿದ್ದೇನೆ. Selective ಆಗಿ ಇವತ್ತು ಮಾಡುತ್ತಾರೆಂಬುದು ನನಗೆ ಗೊತ್ತಿಲ್ಲ.

---

x ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಇದು ಹಿಂದೆ ನೀವು ಮಾಡಿದ ಸಂಪ್ರದಾಯ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಂದರೆ ಹೌಸ್ ಸ್ಟಾರ್ಟ್ ಮಾಡುತ್ತೀರಿ? ಆಮೇಲೆ ಅವರಿಗೆ ಬೇಕಾದ ಹಾಗೆ ಅನುಕೂಲಗಳನ್ನು ಮಾಡಿಕೊಡುವುದು.

ಅಧ್ಯಕ್ಷರು : ನೋ, ನೋ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೇರೆಯವರಿಗೆ ಅನಾನುಕೂಲಗಳನ್ನು ಮಾಡುವುದು.

ಅಧ್ಯಕ್ಷರು : ಹಿಂದೆ ನೋಡಿ. ಈ ಅವಿಶ್ವಾಸ ನಿರ್ಣಯ, ವಿಶ್ವಾಸ ಮತಕ್ಕೂ ಆಗೆಲ್ಲಾ ಕೇಳಿದ್ದರು ಕೊಟ್ಟಿದ್ದೇನೆ. ಈಗ ಇದಕ್ಕೂ ಸಹ ಕೊಟ್ಟಿದ್ದೇನೆ. ಈಗ 3 ದಿವಸದ ಹಿಂದೆ ಬಂದಿದ್ದಾಗ, ಅದಕ್ಕೂ ಸಹ ಕೊಟ್ಟಿದ್ದೇನೆ. ಆದ್ದರಿಂದ ನಾನು ಸೆಲೆಕ್ಟೀವ್ ಆಗಿ ಇವತ್ತು ಒಂದು ದಿವಸವೆಂದು ಕೊಟ್ಟಿಲ್ಲ. ಅವರು ಸೆಲೆಕ್ಟೀವ್ ಆಗಿ ಮಾಡುವುದು ನನಗೇನೂ ಗೊತ್ತಿಲ್ಲ.

(ಅಡಚಣೆ)

ಶ್ರೀ ಎನ್.ಎಸ್. ಬೋಸರಾಜ್ : ನಮ್ಮ ಪರವಾಗಿ ಮತದಾರರು ಇಲ್ಲವೇ? ಎಲ್ಲರಿಗೂ ಸಹ ಮತದಾರರು ಇದ್ದಾರೆ. ಅದರ ಬಗ್ಗೆ ನಾವು ಯಾಕೆ ಮಾತನಾಡಬೇಕು. ತಮಗೆ ಗೊತ್ತಾಗುವುದಿಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ಅದು ನಿಲ್ಲಬೇಕು. ನೇರ ಪ್ರಸಾರ ನಿಲ್ಲಿಸಬೇಕು. ನೇರ ಪ್ರಸಾರವಾಗುವುದನ್ನು ನಿಲ್ಲಿಸಿ, ನೇರಪ್ರಸಾರವಾಗುವುದನ್ನು ನಿಲ್ಲಿಸಿ, ನಾವು ಸಭೆಯನ್ನು ನಡೆಯುವುದಕ್ಕೆ ಬಿಡುತ್ತೇವೆ. ಇಲ್ಲದಿದ್ದರೆ ಸಭೆ ನಡೆಯುವುದಕ್ಕೆ ಬಿಡುವುದಿಲ್ಲ. ಅದೇನು ಆಗುತ್ತದೆ ಅದನ್ನು ನೋಡೇ ಬಿಡೋಣ.

ಅಧ್ಯಕ್ಷರು : ಈಗ ಪ್ರಶ್ನೋತ್ತರವನ್ನು ಆರಂಭ ಮಾಡೋಣ. ದಯಮಾಡಿ ಕೇಳಿ.

ಶ್ರೀ ವಾಟಾಳ್ ನಾಗರಾಜ್ : ಅದು ಸಾಧ್ಯವಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : ನಾನು ಹೇಳಿದೆನಲ್ಲಾ ಒಬ್ಬರಿಗೊಂದು ಒಬ್ಬರಿಗೊಂದು ಮಾಡುತ್ತಿಲ್ಲ.

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್ : ನಾವೆಲ್ಲರೂ ಧರಣಿಗೆ ಬರುತ್ತೇವೆ.

MR. SPEAKER : Two days back I have received a letter. I have given permission. ಇವತ್ತಿಗೇನೆಂದು ನಾನು ಕೊಟ್ಟಿಲ್ಲ. ಅದನ್ನು I am making clear.

ಶ್ರೀ ವಾಟಾಳ್ ನಾಗರಾಜ್ : xxx

ಶ್ರೀ ಜೆ.ಎಚ್. ಪಟೇಲ್ ರೆಡ್ಡಿ : ಅಲ್ಲಾ ಅಧ್ಯಕ್ಷರೆ, ಇಡೀ ಡಿಬೇಟ್ ಬಗ್ಗೆ ನೇರ ಪ್ರಸಾರವನ್ನು ಮಾಡಿಲ್ಲ. ಉತ್ತರವನ್ನು ಹೇಗೆ ನೇರ ಪ್ರಸಾರ ಮಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ಸರ್ಕಾರವನ್ನು ಬೈದಾಗ ಮಾತ್ರ ಅದನ್ನು ಗುಟ್ಟಾಗಿ ಇಡಬೇಕು. ವಿರೋಧ ಪಕ್ಷದವರನ್ನು ಬೈಯುವಾಗ ನೇರವಾಗಿ ಪ್ರಸಾರವನ್ನು ಮಾಡಬೇಕು. ಇದು ಯಾವ ರೀತಿ ನಿಮ್ಮದು? ಇದರ ಉದ್ದೇಶವೇನು?

ಅಧ್ಯಕ್ಷರು : ಇದರ ಉದ್ದೇಶವೇನೂ ಇಲ್ಲ. ಎಲ್ಲಾ ಬರಬೇಕೆಂದು ಅವರು ರಿಕ್ವೆಸ್ಟ್ ಮಾಡಿದಾಗ ನಾನು ಕೊಟ್ಟಿದ್ದೇನೆ. ನಾವು ಸೆಲೆಕ್ಟೀವ್ ಆಗಿ ಇವತ್ತು ಮಾಡುತ್ತಾರೆಂಬುದು ನನಗೆ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : xxx ನಿಮ್ಮ ಬಗ್ಗೆ ನಾವು ಗೌರವವನ್ನು ಇಟ್ಟುಕೊಂಡಿದ್ದೇವೆ. xxx ಈಗ ನೇರಪ್ರಸಾರವನ್ನು ನಿಲ್ಲಿಸಿ. ತಕ್ಷಣ ಅದನ್ನು ನಿಲ್ಲಿಸಬೇಕು.

(ಅಡಚಣೆ)

(ವಿರೋಧ ಪಕ್ಷದ ಸದಸ್ಯರಿಂದ ಧರಣಿ)

ಶ್ರೀ ವಾಟಾಳ್ ನಾಗರಾಜ್ : ಏನು ಇದ್ದಕ್ಕಿದ್ದ ಹಾಗೆ ನೀವು ನೇರ ಪ್ರಸಾರ ಮಾಡುತ್ತೀರಿ? ನಿಮಗೆ ಬೇಕೆಂದಾಗ ನೇರಪ್ರಸಾರ, ಏತಕ್ಕೆ ಬೇಕು?

(ಅಡಚಣೆ)

ಅಧ್ಯಕ್ಷರು : ಈಗ ಪ್ರಶ್ನೋತ್ತರವನ್ನು ಆರಂಭ ಮಾಡೋಣ. ದಯಮಾಡಿ ತಾವುಗಳು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ವಾಟಾಳ್ ನಾಗರಾಜ್ : ಇದರಲ್ಲಿ ರಾಜೀ ಇಲ್ಲವೇ ಇಲ್ಲ.

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್ : ಸಭೆಯನ್ನು ಮುಂದಕ್ಕೆ ಹಾಕಿ. ಸಭೆಯು ಮುಂದೆ ಹೋಗಲಿ. ಇದರಲ್ಲಿ ರಾಜೀ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು) : ಮಾನ್ಯ ಅಧ್ಯಕ್ಷರೆ, ಸಾರ್ ಒಂದು ನಿಮಿಷ ಸಾರ್.

ಶ್ರೀ ವಾಟಾಳ್ ನಾಗರಾಜ್ : ಇವತ್ತು ಸಭೆಯನ್ನು ನಡೆಸಬೇಕೆಂದರೆ, ತಾವು ನೇರ ಪ್ರಸಾರವಾಗುವುದನ್ನು ನಿಲ್ಲಿಸಬೇಕು.

---

x ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

(ಅಡಚಣೆ)

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ ಸಾರ್. ದಯಮಾಡಿ ಕೇಳಿ ಬೇರೆ ಬೇರೆ ಅನೇಕ ಕಾರಣಗಳಿಗೋಸ್ಕರ ಕಾರ್ಯಕಲಾಪಕ್ಕೆ ಅಡ್ಡಿಯಾಗಬಾರದು. ತಾವು ಏನಾದರೂ ತೀರ್ಮಾನವನ್ನು ತೆಗೆದುಕೊಂಡಿದ್ದರೆ, ಒಂದು 5 ನಿಮಿಷ ಅಡ್ಜರ್ನ್ ಮಾಡಿ. ಅಥವಾ ಬೇರೆಯವರನ್ನು ಕೂರಿಸಿ. ಕೇಳಿ ಸಾರ್, ಒಂದು ನಿಮಿಷ. ಇಡೀ ವಿರೋಧಪಕ್ಷ ನಮ್ಮ ಎಲ್ಲಾ ನಾಯಕರು ಇದು ಸತ್ ಸಂಪ್ರದಾಯವಲ್ಲ. ಅದೊಂದಕ್ಕೆ ಮಾತ್ರ ಅವಕಾಶವನ್ನು ಕೊಡುತ್ತೀರಿ. ನಮಗೇಕೆ ಅವಕಾಶವನ್ನು ಮಾಡಿಕೊಡುತ್ತಿಲ್ಲ ಎಂದು ಕೇಳುತ್ತಿದ್ದಾರೆ. ದಯಮಾಡಿ ತಾವು ನಿಮ್ಮ ಕೊಠಡಿಗೆ ಕರೆದು ವಿರೋಧಪಕ್ಷದ ನಾಯಕರುಗಳ ಜೊತೆ ಮಾತನಾಡಿ ಅವರಿಗೆ ಕನ್‌ವಿನ್ಸ್ ಮಾಡೋಣ. ಅವರು ಸಾಧ್ಯವೇ ಇಲ್ಲವೆಂದರೆ ನಿಮ್ಮ ತೀರ್ಮಾನವೆಂದು ಅಲ್ಲಿ ಹೇಳಿ. ಇದರ ಬಗ್ಗೆ ಕುಳಿತುಕೊಂಡು ಚರ್ಚೆ ಮಾಡೋಣ. ಇಲ್ಲದೆ ಹೋದರೆ, ಅನಗತ್ಯವಾಗಿ ಈ ರಾಜ್ಯದ ಜನತೆಗೆ ಈ ತರಹ ಏನೋ ಒಂದು ತೀರ್ಮಾನವನ್ನು ತೆಗೆದುಕೊಂಡರು. ಏನು ಒಂದು ಅದು ಸರಿಹೋಗುತ್ತಿಲ್ಲ. ಆ ಭಾವನೆ ಬರುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್ : ಅದು ಬಂದಿದೆ. ಯಡಿಯೂರಪ್ಪನವರೆ, ನೇರವಾಗಿ ಬಂದಿದೆ. ಇಲ್ಲಿ x ಮಾಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಗರಾಜ್‌ರವರೆ, ದಯಮಾಡಿ ಕೇಳಿ. ತಾವು ದಯಮಾಡಿ ಸಹಕರಿಸಿ. ನಾನು ಸರ್ಕಾರದ ಪರವಾಗಿ ನಿಂತು ಮಾತನಾಡಬೇಕಾದರೆ ನೀವು ನನಗೆ ಸಹಕರಿಸಬೇಕಲ್ಲವೇ? ನಿಮ್ಮ ಭಾವನೆಗೆ ನಾನು ಸ್ಪಂದಿಸುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಸಂತೋಷ, ಅರ್ಥವಾಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ತಮ್ಮ ತೀರ್ಪಿಗೆ ನಮ್ಮ ವಿರೋಧಪಕ್ಷದ ಕಡೆಯಾಗಲಿ, ಆಡಳಿತ ಪಕ್ಷದ ಕಡೆಯಾಗಲಿ ಯಾವುದೇ ಪ್ರಶ್ನೆ ಮಾಡುವಂತಹದ್ದು ಯಾವುದೂ ಕೂಡ ಆಗಲೇಬಾರದು. ತಾವು ನಿಜವಾಗಿಯೂ ಹಿಂದೆ ಈ ರೀತಿಯ ಘಟನೆಗಳು ಆಗಿದ್ದರೆ ವಿಶೇಷವಾದಂತಹ ಅನುಕೂಲಗಳನ್ನು ಹಿಂದಿನ ಕಾಲದಲ್ಲಿ ಆಗಿತ್ತು ಅದನ್ನು ಮಾಡಿದ್ದರು. ಅದರಂತೆ ಮಾಡಿದ್ದೇನೆ ಎಂದರೆ ಅಷ್ಟು ಅನುಭವ ಇರುವಂತಹ ವಿರೋಧ ಪಕ್ಷದಲ್ಲಿ ಕುಳಿತಿರುವಂತಹ ಇಷ್ಟು ವರ್ಷ ಆಡಳಿತವನ್ನು ನಡೆಸಿರುವಂತಹವರು ತಲೆಬಾಗಿ ಒಪ್ಪಿಕೊಳ್ಳುತ್ತಾರೆ. ಇಲ್ಲದೇ ಇದ್ದರೆ, ಪದೇ ಪದೇ ನಿಮ್ಮ ಯಾವುದೋ ತೀರ್ಪನ್ನೇ ನಾವು ಪ್ರಶ್ನೆ ಮಾಡುತ್ತೇವೆ ಎನ್ನುವಂತಹ ಮೆಸೇಜ್ ರಾಜ್ಯದ ಜನತೆಗೆ ಹೋಗುವುದು ಒಳ್ಳೆಯದಲ್ಲ. ಅದಕ್ಕಾಗಿ ನಾನು ಕೈಜೋಡಿಸಿ ವಿನಂತಿ ಮಾಡುತ್ತೇನೆ. ಏನೂ ತಪ್ಪಿಲ್ಲ. ತಾವು ತೀರ್ಮಾನವನ್ನು ತೆಗೆದುಕೊಂಡಿದ್ದೀರಿ. ಅದರ ಬಗ್ಗೆ 5 ನಿಮಿಷ ತಮ್ಮ ಕೊಠಡಿಯಲ್ಲಿ ಕುಳಿತು ಮಾತನಾಡಿ ತಾವು ಏನು ಹೇಳುತ್ತೀರೋ ಅದರಂತೆ ಎಲ್ಲರನ್ನೂ ಕನ್‌ವಿನ್ಸ್ ಮಾಡಿ ಜೊತೆಗೆ ತೆಗೆದುಕೊಂಡು ಹೋಗೋಣ ಸಾರ್. ಒಂದು 5 ನಿಮಿಷ ಅಡ್ಜರ್ನ್ ಮಾಡಿ

ನಿಮ್ಮ ಕೊಠಡಿಗೆ ನಾವು ಬರುತ್ತೇವೆ. ಪಾರ್ಲಿಮೆಂಟ್ ಅಫೆರ್ಸ್ ಮಿನಿಸ್ಟರ್ ಕರೆಸೋಣ. ಮಾತನಾಡಿ ಬಿಟ್ಟು ಒಂದು ತೀರ್ಮಾನಕ್ಕೆ ಮತ್ತೆ ಬರೋಣ. ಇದೇ ಒಂದು ದೊಡ್ಡ ಸುದ್ದಿ ಆಗಬಾರದು ಸಾರ್. ಒಂದು 5 ನಿಮಿಷ ಅಡ್ಜರ್ನ್ ಮಾಡಿ. ಹಿಂದೆ ಇದು ಯಾವಾಗಲೂ ಇತ್ತಾ ಸಾರ್. ಅದನ್ನು ನೋಡಿ, ಇಲ್ಲವೆಂದರೆ ಬೇಡ. ವಿಶೇಷವಾದ ಸವಲತ್ತುಗಳು ನಮಗೆ ಏತಕ್ಕಾಗಿ ಬೇಕು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಿಂದೆ ಕೂಡ ಗೊತ್ತಿದೆ. ಮಾನ್ಯ ಯಡಿಯೂರಪ್ಪನವರಿಗೂ ಕೂಡ ಸಾಕಷ್ಟು ಅಂದರೆ 25 ವರ್ಷದಿಂದ ಈ ಸದನದ ಸದಸ್ಯರಾಗಿದ್ದಾರೆ. ಈಗ ಅವರಿಗೂ ಕೂಡ ಗೊತ್ತಿದೆ. ಒಂದೇ ರಿಪ್ಲೈಗೆ ಕೆಲವೇ ಗಂಟೆಗಳಿಗೆ ಯಾರೂ ಕೂಡ ಕೊಟ್ಟಿಲ್ಲ.

ಅಧ್ಯಕ್ಷರು : ಮಾನ್ಯ ಖರ್ಗೆಯವರೆ, I wanted to make it clear. ಏನಾಗಿದೆ ಹಿಂದೆ ಕೆಲವು ಟಿವಿಯವರು ಕೇಳಿದ್ದರು. ಅವಿಶ್ವಾಸ ಮತ್ತು ವಿಶ್ವಾಸ ಮತದ ಬಗ್ಗೆ ನಡೆಯುವಾಗ ಕೇಳಿದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಎಲ್ಲದಕ್ಕೂ ಕೊಡಿ.

(ಅಡಚಣೆ)

ಅಧ್ಯಕ್ಷರು : ದಯಮಾಡಿ ನಾನು ಹೇಳುವುದನ್ನು ಕೇಳಿ. ಈಗ ಏನಾಗಿದೆ ಎಂದರೆ ಈ ಹಿಂದೆ ನೈಸ್ ವಿಚಾರದ ಬಗ್ಗೆಯೂ ಸಹ ನನಗೆ ಕೇಳಿದ್ದರು. ಆಗ ಕೊಟ್ಟಿದ್ದೇನೆ. ಆಗ ಏನೂ ಅಬ್ಜಕ್ಷನ್ ಇಲ್ಲ. ಈಗ 3 ದಿವಸದ ಹಿಂದೆಯೇ ನಾನು ಕೊಟ್ಟಿದ್ದೆ. I thought ಎಲ್ಲಾ ಕವರ್ ಆಗುತ್ತದೆ ಎಂದು ಪ್ರಮುಖವಾದ ವಿಚಾರವೆಂದು ಕೇಳುತ್ತಾರೆ. ನಾನು ಇವತ್ತು ಎಂದು ನನಗೆ ಗೊತ್ತಿಲ್ಲ. ನಾನು ನಿನ್ನೆ ಕೊಟ್ಟಿದ್ದರೆ

(ಅಡಚಣೆ)

ಅಧ್ಯಕ್ಷರು : ನಾನು ಕೊಟ್ಟಿರುವುದು ಎರಡು ದಿವಸದ ಮೊದಲು. ಆ ಕಾರಣದಿಂದ ಇವತ್ತು ಎಂದು ನನಗೆ ಗೊತ್ತಿಲ್ಲ. ಆಯಿತು. ಸದನವನ್ನು ಅರ್ಧಗಂಟೆಗಳ ಕಾಲ ಮುಂದೂಡಲಾಗಿದೆ.

(ಸದನವು 10 ಗಂಟೆ 31 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಅರ್ಧ ಗಂಟೆಯ ನಂತರ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನ ಪುನಃ 12.38 ಗಂಟೆಗೆ ಪ್ರಾರಂಭವಾಯಿತು, ಅಧ್ಯಕ್ಷರು (ಶ್ರೀ ಕೃಷ್ಣರವರು) ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು : ಈಗ ನಿಯಮ 69ರ ಮೇರೆಗೆ ನಡೆದ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ.